ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ನವನಗರ, ಬಾಗಲಕೋಟ-02
Tel: 08354/297330, Mob No- 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, Navanagar, Bagalkot-02
E-mail ID: seebgkt.hescom@gmail.com
dcabgkt.hescom@gmail.com
Corporate Identity Number(CIN): U31401KA2002SGC030437

ಕ್ರ.ಸಂ:ಅಿಕೆ/ಅಇಂ(ವಿ)/ಅಲೆವಿ/ಸಲೆ/ಹಿಸ-1/2020-21/ ದಿನಾಂಕ:

**ದಿನಾಂಕ: 21.02.2022 ರಂದು ಮಧ್ಯಾಹ್ನ 3.30 ಘಂಟೆಗೆ ಶ್ರೀ ಕಾಶೀನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.**

**ಹಾಜರಿದ್ದವರು:** 1) ಶ್ರೀ.ಎಸ್. ಬಿ. ಪಾಟೀಲ,ಕಾರ್ಯನಿರ್ವಾಹಕಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಜಮಖಂಡಿ.

2) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಜಮಖಂಡಿ.

3) ಶ್ರೀ.ಶ್ರೀಶೈಲ ಬಸವರಾಜ ಕಟಗಿ, ಮಲ್ಲಿಕಾರ್ಜುನ ಗಲ್ಲಿ ಜಮಖಂಡಿ.

<u>ಪ್ರಕರಣ ಸಂಖ್ಯೆ: 01/2022</u>

ಶ್ರೀ ಶ್ರೀಶೈಲ ಬಸವರಾಜಕಟಗಿ --------ದೂರುದಾರರು.

**ವಿರುದ್ಧ**

ಸಹಾಯಕಕಾರ್ಯನಿರ್ವಾಹಕಅಭಿಯಂತರರು(ವಿ),
ಕಾರ್ಯ ಮತ್ತುಪಾಲನಾ ಉಪ-ವಿಭಾಗ ಹುವಿಸಕಂನಿ.,
ಜಮಖಂಡಿ. -------- ಪ್ರತಿವಾದಿ

**ವಿಷಯ:** "ಸ್ಥಾವರ ಸಂಖ್ಯೆ:ಸಿ40404 ರ ಮೇಲಿನ ಹೆಚ್ಚುವರಿ ಠೇವಣಿ ಹಿಂದಿರುಗಿಸುವ ಕುರಿತು."

ಪ್ರಕರಣ ಸಂಖ್ಯೆ: 01/2022ಕ್ಕೆ ಸಂಬಂಧಿಸಿದಂತೆ, ದಿನಾಂಕ:21.02.2022 ರಂದು **ಮಧ್ಯಾಹ್ನ 3.30 ಘಂಟೆಗೆ** ಶ್ರೀ.**ಕಾಶೀನಾಥ. ಹಿರೇಮಠ,** ಅಧೀಕ್ಷಕಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**<u>ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಜಮಖಂಡಿ ರವರ</u>**

<u>ಹೇಳಿಕೆ :</u>

ಪತ್ರ ಸಂಖ್ಯೆ:2715 ದಿನಾಂಕ:06-09-2021 ರ ಪತ್ರದಲ್ಲಿ ಗ್ರಾಹಕರಿಗೆ ವಿದ್ಯುತ್ ಸರಬರಾಜು ಪಡೆಯುವ ಸಂದರ್ಭದಲ್ಲಿ ಭರಣಾ ಮಾಡಿದ ಭದ್ರತಾ ಠೇವಣಿ ಮೊತ್ತದ ಮೂಲ ರಸೀದಿಗಳನ್ನು ಹಾಗೂ ರಿಫಂಡ್ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿತ್ತು ಎಂದು ಹೇಳಿದರು.

<u>ಶ್ರೀ ಶ್ರೀಶೈಲ ಬಸವರಾಜಕಟಗಿರವರ ಹೇಳಿಕೆ :</u>

ಸ್ಥಾವರ ಸಂಖ್ಯೆಸಿ-40404 ರ ಮೇಲೆ ಮೊದಲು ಹತ್ತು ಕಿಲೋ ವ್ಯಾಟ್ ಸಂಪರ್ಕಿತ ಪ್ರಮಾಣವಿದ್ದು, ಅದಕ್ಕೆ ಬೇಕಾಗಿರುವ ಠೇವಣಿ ಮೊತ್ತ ರೂ.20,000/- ಗಳನ್ನು ಭರಣಾ ಮಾಡಿದ್ದು, ದಿನಾಂಕ:01-07-2021ರಂದು ರಿಡಕ್ಷನ್ ಆಫ್ ಲೋಡ್ ಒಂದು ಕಿಲೋ ವ್ಯಾಟ್ ಗೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಜಮಖಂಡಿ ಇವರ ಆದೇಶ ಸಂಖ್ಯೆ:958331141 ರಂತೆ ದಿನಾಂಕ:01-07-2021 ರಂದು ಮಾಡಿಕೊಳ್ಳಲಾಯಿತು. ಈ ಸ್ಥಾವರದ ಠೇವಣಿ ಮೊತ್ತ ರೂ.20,000/- (ಇಪ್ಪತ್ತು ಸಾವಿರ ಮಾತ್ರ) ಹೆಚ್ಚು ಭದ್ರತಾ ಠೇವಣಿ ಇದ್ದು ಸದ್ಯದ ಮೊತ್ತಕ್ಕೆ ಬೇಕಾಗುವಷ್ಟು ಠೇವಣಿ ಇಟ್ಟುಕೊಂಡು ಉಳಿದ ಹಣವನ್ನು ಹಿಂದಿರುಗಿಸುವಂತೆ ಜಮಖಂಡಿ ಉಪವಿಭಾಗಾಧಿಕಾರಿಗಳಿಗೆ ವಿನಂತಿಸಿಕೊಂಡಿರುತ್ತೇವೆ. ನಿಯಮಾನುಸಾರ 60 ದಿವಸಗಳ ಒಳಗೆ ಅಂದರೆ 01-09-2021 ರ ಒಳಗೆ ಕೆಇಆರ್‌ಸಿ ನಿಯಮಾವಳಿಗಳ ಸಂಖ್ಯೆ:34/04 ಹೆಚ್ಚುವರಿ ಹಣಹಿಂದಿರುಗಿಸಬೇಕು.

ನಾವು ಅರ್ಜಿ ಕೊಟ್ಟು 90 ದಿನಗಳು ಕಳೆದರೂ ಹೆಚ್ಚಿಗೆ ಉಳಿದಿರುವ ಭದ್ರತಾ ಠೇವಣಿ ಹಣವನ್ನು ಹಿಂದಿರುಗಿಸಲಾಗಿಲ್ಲ. ಈ ಕುರಿತು ಅವರಿಂದ ಯಾವುದೇ ಪತ್ರ ಸೂಚನೆ ಬಂದಿರುವದಿಲ್ಲ. ನಮ್ಮ ಪತ್ರವನ್ನು ದೂರು ಎಂದು ದಾಖಲಿಸಿಕೊಂಡು ನಮಗೆ ಬರಬೇಕಾದ ಹಣವನ್ನು ತಕ್ಷಣವೇ ಹಿಂದಿರುಗಿಸಲು ಕ್ರಮ ತೆಗೆದುಕೊಂಡು ಗ್ರಾಹಕರಿಗೆ ನ್ಯಾಯ ಒದಗಿಸಿಕೊಡಬೇಕೆಂದು ವಿನಂತಿಸಿರುವರು.

## ಆ ದೇ ಶ

**ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2021-22/** 10453-10457 **ದಿನಾಂಕ:** 24 FEB 2022

ಸದರಿ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಹೆಸ್ಕಾಂ, ಜಮಖಂಡಿ ಹಾಗೂ ಪ್ರಭಾರಿ ಸಹಾಯಕ ಲೆಕ್ಕಾಧಿಕಾರಿ ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಹೆಸ್ಕಾಂ ಜಮಖಂಡಿ ಇವರಿಗೆ ಸದರೀ ಸ್ಥಾವರದ ಹೆಚ್ಚುವರಿ ಉಳಿದಿರುವ ಠೇವಣಿಯ ಮೊತ್ತವನ್ನು ಹಿಂದಿರುಗಿಸಲು ಮೂಲ ರಸೀದಿ ಅಥವಾ ಗ್ರಾಹಕರಿಂದ ಇಂಡಿಮಿನಿಟಿ ಬಾಂಡ್ ಹಾಗೂ ರೀಫಂಡ್ ಫಾರ್ಮ (2 ಪ್ರತಿ)ಅಗತ್ಯ ದಾಖಲೆಗಳನ್ನು ಪಡೆದು ನಿಗಮದ ನಿಯಮಾನುಸಾರ ಸದರೀ ಗ್ರಾಹಕರಿಗೆ ಈ ಆದೇಶದ ದಿನಾಂಕದಿಂದ 30 ದಿನಗಳೊಳಗಾಗಿ ಹೆಚ್ಚಿನ ಭದ್ರತಾ ಠೇವಣಿಯನ್ನು ಮರಳಿಸುವುದು ಎಂದು ಆದೇಶಿಸಿ ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಎಸ್ ಜಿ ಸಾತಿಹಾಳ
ಉಪ-ಲೆಕ್ಕನಿಯಂತ್ರಣಾಧಿಕಾರಿ,
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟೆ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟೆ.

23/2

ಅಧ್ಯಕ್ಷರು,
(ಕಾಶೀನಾಥ.ಜಿ ಹಿರೇಮಠ,)
ಅಧೀಕ್ಷಕಅಭಿಯಂತರರು(ವಿ)ಬಾಗಲಕೋಟೆ ಹಾಗೂ ಗ್ರಾಹಕರ
ಕುಂದುಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ,ಬಾಗಲಕೋಟೆ.

ಪ್ರತಿಯನ್ನು:

1) ಮುಖ್ಯಇಂಜನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಜಮಖಂಡಿರವರ ಮಾಹಿತಿಗಾಗಿ. .
4) ಸಹಾಯಕಕಾರ್ಯನಿರ್ವಾಹಕಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಜಮಖಂಡಿರವರ ಮಾಹಿತಿಗಾಗಿ.
5) ಶ್ರೀ.ಶ್ರೀಶೈಲ ಬಸವರಾಜಕಟಗಿ, ಮಲ್ಲಿಕಾರ್ಜುನಗಲ್ಲಿಜಮಖಂಡಿ. ಮೋಬೈಲ ಸಂಖ್ಯೆ:9448960108.
6) ಕಛೇರಿ ಪ್ರತಿ/ಪ್ರಧಾನಕಡತ.